ಬಯಸುತ್ತಾದರೂ, ಜೀನಿಯಸ್ಸು ಒಂಟಿಯಾಗಿರಬೇಕೆಂದು ಬಗೆಯುತ್ತೆ ಅಂದಿದ್ದು ನನಗಾಗಿಯೇ ಹೇಳಿದ್ದೇನೋ ಅನ್ನಿಸಿತು... ಹೇಗಾದರೂ ಮಾಡಿ, ಒಂದೇ ಒಂದು ಸಲ ನಿನ್ನ ಮೈಸಂಗ ಮಾಡಬೇಕು ಅನ್ನೋದು ನೀಗದ ಬಯಕೆಯೇ ಆಗಿಹೋಯಿತು...'

'ಹವ್ವ್ ಸ್ಟುಪಿಡ್!'

'ಹಾಗನ್ನಬೇಡ... ನಾನೇನು ಹೇಳುತಿದ್ದೀನೀಂತ ನಿನಗೆ ಅರ್ಥ ಆಗುತಿದೆ... ಯಾಕೆಂದರೆ, ನೀನು ನನ್ನಂಥದೇ ಇನ್ನೊಂದು ರೂಪ; ನನ್ನದೇ ಗಂಡುರೂಪ ಅಷ್ಟೆ!'

'ಓಕೆ... ಗೋ ಅಹೆಡ್... ನಾನು ಆಮೇಲೆ ಮಾತಾಡುತೀನಿ...'

'ಕಳೆದ ಭಾನುವಾರ ನಿನ್ನನ್ನು ಫೋರಮಿನಲ್ಲಿ ನೋಡಿದೆ! ಮೋಹನಸ್ವಾಮಿಯ ಜತೆ!! ನನ್ನ ಉತ್ಸಾಹವಷ್ಟೂ ಭಂಗವಾಗಿಬಿಟ್ಟಿತು... ಮುಖಭಂಗದ ಹಾಗಿತ್ತು... ನಂಬಿದ ದೈವವೇ ಕೈಕೊಟ್ಟಂತಹ ಪರಿಸ್ಥಿತಿ ತಾನೆ? ನೀನೇ ಎಲ್ಲೋ ಬರೆದ ನೆನಪು ಚಂದದ ಹುಡುಗಿ ಅಂತ ಬೆನ್ನಟ್ಟಿಹೋದರೆ ಯೂನಕ್ಕು ಸಿಕ್ಕಂತಾಯಿತು ಅಂತ! ನನ್ನದೂ ಅದೇ ಅವಸ್ಥೆಯಾಗಿತ್ತು... ಆಗಲೇ ಹೇಳಿದೆನಲ್ಲ ತೆರೆಯ ಮೇಲೆ ಕಾಣೋದು ಸತ್ಯವಲ್ಲ ಅನ್ನೋ ಒಂದು ನನ್ನ ನಂಬಿಕೆ ಇದೆ ಅಂತ, ನೀನು ಆ ನಂಬಿಕೆಯನ್ನು ಸುಳ್ಳು ಮಾಡಿದೆ. ಹುಹ್ವ್... ಅದೇನೋ ಸರಿ, ಆದರೆ ನಾನು ಈವರೆಗೆ ಕಟ್ಟಿಕೊಂಡಿದ್ದ ಕನಸನ್ನೇನು ಮಾಡುವುದು? ಮೊಳೆಯದ ಬಿತ್ತಗಳನ್ನು ಎಷ್ಟು ಕಾಲವಂತ ಕಾಪಿಟ್ಟುಕೊಳ್ಳೋದು? ಅವು ನನ್ನ ಹತಾಶೆಗಳಾದರೂ ಸರಿಯೆ ಅವನ್ನು ನಿನ್ನವರೆಗೂ ತಲುಪಿಸಲೇಬೇಕೆಂದು ನಿರ್ಧಾರ ಮಾಡಿದೆ... ಹಾಗಾಗಿ, ಮತ್ತೆ ಮೋಹನಸ್ವಾಮಿಯ ಬಳಿ ಹೊಕ್ಕೆ... ಅವನು ನನಗೆ ಚೆನ್ನಾಗಿ ಗೊತ್ತು. ಅವನನ್ನು ಓದಿದ್ದೀನಿ... ಮಾತಾಡಿಸಿದ್ದೀನಿ... ಹತ್ತಿರದಿಂದ ನೋಡಿದ್ದೀನಿ... ಸರಿ. ಅವನ ಮೂಲಕ ನಿನ್ನ ಏನುವತ್ತ ತಿಳಕೊಂಡು ಇವೊತ್ತು ಬೆಳಗಿನಿಂದ ನಿನ್ನನ್ನು ಫಾಲೋ ಮಾಡಿಕೋತಾ ಬಂದೆ! ಮಧ್ಯಾಹ್ನ ಕೋಶಿಸ್ ಕೆಫೆಯಲ್ಲಿ ಊಟ ಮಾಡಿದೆಯಲ್ಲ, ಆಗ ಬದಿಮೇಜಿನಲ್ಲೇ ನಾನಿದ್ದೆ...'

'ವ್ವ್... ವ್ವಾಟ್?!'

'ಯೆಸ್ಸ್... ಅಲ್ಲೇ ಇದ್ದೆ... ಬೇಕಿದ್ದರೆ ನೀನೇನು ಆರ್ಡರು ಮಾಡಿ ತಿಂದೆ ಅಂತಲೂ ಹೇಳಬಲ್ಲೆ!'

'ಅಬ್ಬಾ! ಹೆಣ್ಣೇ... ನೀನು ನಾನೆಣಿಸಿದ್ದಕ್ಕಿಂತ ಹೆಚ್ಚೇ ಲೌಡಿ ಕಣೇ... ಸರಿ. ಹೊತ್ತಾಗುತ್ತಿದೆ... ಹೊರಡೋಣವಾ ಇನ್ನು?'

'ಇರು ಇರು... ಇನ್ನೊಂದು ಐದುಹತ್ತು ನಿಮಿಷ ಅಷ್ಟೆ. ನಿನಗೋಸ್ಕರ ನನ್ನ ಉಮೇದುಗಳನ್ನೆಲ್ಲ ಕಟ್ಟಿಕೊಂಡಿದ್ದೆನಲ್ಲ... ಇರಲಿ... ನಾನೇನೋ ನನ್ನ ಬಗ್ಗೆ ಹೇಳಿಕೊಂಡೆ. ನನ್ನ ಆರಾಧ್ಯದೈವ ನೀನು, ಹಾಗಾಗಿ ಸುಮ್ಮನೆ ಔಪಚಾರಿಕವಾಗಿ ಏನನ್ನಾದರೂ ಪ್ರತಿಕ್ರಿಯಿಸು...'

## ಮಂಗಳ:

ಆಮ್ರಪಾಲಿ ನನ್ನ ಕುರಿತು, ತನ್ನ ಕುರಿತು ಹೇಳಬಹುದಾದ್ದನ್ನೆಲ್ಲ ಹೇಳಿದ್ದಳು. ಆಡುವಾಗ ಅವಳ ಧ್ವನಿ ಏರಲಿಲ್ಲ. ಇಳಿಯಲಿಲ್ಲ. ಭಾವಾವೇಶ ತೂಗಲಿಲ್ಲ. ಅಳುಕಿಲ್ಲ, ಅಂಜಿಲ್ಲ... ಆಡುವುದಷ್ಟನ್ನೂ ಸರಾಗವಾಗಿ ಸುಭಗವಾಗಿ ಆಡಿಬಿಟ್ಟಳು. ಆಡಿ ಮುಗಿದ ಮೇಲೆ, ಸರದಿ ನಿನ್ನದೆಂದು ನಾವು ಹಾಡುವವರು ಅಕ್ಕಪಕ್ಕದ ವಾದ್ಯಗಳಿಗೆ ಎಡೆಮಾಡಿ ಕೊಡುವ ಹಾಗೆ, ಮಾತಿಗೆ ಬಿಟ್ಟುಕೊಟ್ಟಳು.